<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ</u>

ಓ ಎಸ್ ನಂ**. 444/2016** ಪಿ **.**ಡಬ್ಲ್ಯೂ**: 1**

<u>ದಿನಾಂಕ: **05.03.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**</u>

<u>ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಶ್ರೀ**. HND** ವಕೀಲರಿಂದ:</u>

ಸರ್ವೆ ನಂ .60 ರ 1 ಎಕರೆ 14 ಗುಂಟೆ ಜಮೀನು ಖಾಲಿ ಇರುತ್ತದೆ ಎಂದರೆ ಸಾಕ್ಷಿ ಅದರಲ್ಲಿ ಬೆಳೆ ಇರುತ್ತದೆ ಎನ್ನುತ್ತಾರೆ . ಸರ್ವೆ ನಂ .60 ನ್ನು ಕೊಂಡಿದ್ದರೂ ಸಹ ಸರ್ವೆ ನಂ .59/2 ಜಮೀನು ಸಹ ನನಗೆ ಸೇರಿದ್ದು ಎಂದು ರೆವಿನ್ಯೂ ಮತ್ತು ಸರ್ವೆ ಅಧಿಕಾರಿಗಳ ಜೊತೆ ಶಾಮೀಲಾಗಿ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳ ಮೇಲೆ ಸರ್ವೆ ನಂ .60/3 ಮತ್ತು ಸರ್ವೆ ನಂ .59/2 ರ ಖಾತೆ ಮತ್ತು ಪಹಣಿಯನ್ನು ನನ್ನ ಹೆಸರಿಗೆ ವರ್ಗಾಯಿಸಿಕೊಂಡು ನನ್ನ ಹೆಂಡತಿಯ ಹೆಸರಿಗೆ ಸುಳ್ಳು ದಾನ ಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಹಕ್ಕು ಅಧಿಕಾರ ಇಲ್ಲದ ಆಸ್ತಿಗಳ ಮೇಲೆ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಸುಳ್ಳು ದಾನ ಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿರುವ ನಕ್ಷೆಯಲ್ಲಿ ತೋರಿಸಿದಂತೆ ಬಂಡಿದಾರಿಯಿಂದ ಸರ್ವೆ ನಂ . 59/1 ರ ಮುಖಾಂತರ 10 ಅಡಿ ಅಗಲ 110 ಅಡಿ ಉದ್ದದ ಕಾಲುದಾರಿ ಇರುತ್ತದೆ ಎಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕಾಲುದಾರಿ ಬಹಳಷ್ಟು ವರ್ಷಗಳಿಂದ ಅಲ್ಲಿ ಇದ್ದು ಅದರಲ್ಲಿ ನಾವುಗಳು ಮತ್ತು ಇತರರು ಓಡಾಡುತ್ತಿದ್ದೆವು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯವರಿಗೂ ಮತ್ತು ನನಗೂ ಯಾವುದೇ ಜಗಳ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ನನ್ನ ಜಮೀನನ್ನು ಅವರಿಗೆ ಮಾರಾಟ ಮಾಡಿ ಎಂದು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಮೇಲ್ಕಂಡ ಕಾಲುದಾರಿಯನ್ನು

ಪ್ರತಿವಾದಿಗಳು ಹಾಳು ಮಾಡಿರುತ್ತಾರೆ ಎನ್ನುವುದು ಸುಳ್ಳು, ಸದರಿ ಕಾಲುದಾರಿ ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ಪ್ರತಿವಾದಿಗಳು ಅದನ್ನು ಹಾಳು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ .59/1 ರ ಪೂರ್ವಕ್ಕೆ ಸರ್ವೆ ನಂ .59/2 ಜಮೀನಿರುವುದಿಲ್ಲ ಮತ್ತು ಅದು ನಮಗೆ ಸೇರಿದ್ದಲ್ಲ ಆದ್ದರಿಂದ ಅಲ್ಲಿ ಕಾಲುದಾರಿ ಇರುವ ಅಥವಾ ಅದನ್ನು ಉಪಯೋಗಿಸುವ ಅವಶ್ಯಕತೆ ನನಗಿರುವುದಿಲ್ಲ ಎಂದರೆ ಸರಿಯಲ್ಲ. ರೈಲ್ವೆ ಹಳಿಯ ಪಕ್ಕದಲ್ಲಿರುವ ಸರ್ಕಾರಿ ಜಾಗದಿಂದ ಶಾಂತರಾಜು ರವರ ಜಮೀನಿನ ಮೂಲಕ ನನ್ನ ಜಮೀನಿಗೆ ಓಡಾಡಲು ದಾರಿ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ಮತ್ತು ಅವರ ಜಮೀನಿನಲ್ಲಿರುವ ಮಾವಿನ ಮರಗಳನ್ನು ಕಡಿದು ಹಾಕಲು ಸದರಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಶಾಂತರಾಜು ರವರ ಜಮೀನಿನಿಂದ ಇರುವ ದಾರಿಯನ್ನು ಉಪಯೋಗಿಸುವ ಅವಶ್ಯಕತೆ ನನಗೆ ಇರುವುದಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ , ಗುಬ್ಬಿ.